# ಸ್ವಾತಂತ್ರ್ಯದ ಸಿರಿಹಣತೆಗೆ ಕುವೆಂಪು ಸಾಹಿತ್ಯ ತೈಲ

ಅಮೃತ ಮಥನ

ಕುವೆಂಪು ಅವರು 1920ರಲ್ಲಿ ಮೈಸೂರಿನ ವೆಸ್ಲಿಯನ್ ಮಿಶನ್ ಸ್ಕೂಲಿನ ಮೊದಲನೆಯ ವರ್ಷದ ವಿದ್ಯಾರ್ಥಿಯಾಗಿದ್ದರು. ಆಗ ಬ್ರಿಟಿಷರನ್ನು ಓಡಿಸಬೇಕೆಂಬ ಸಂಕಲ್ಪದ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ವಿದೇಶಿ ವಸ್ತ್ರದಹನದ ಚಳವಳಿಯಲ್ಲಿ ಹೊಸದಾಗಿ ಕೊಂಡಿದ್ದ ಫೆಲ್ಟ್ ಕ್ಯಾಪ್ ಮತ್ತು ಕೋಟನ್ನು ಬೆಂಕಿಗೆ ಎಸೆದರು. ಅಂದಿನಿಂದ ಗಾಂಧಿ ಟೋಪಿ ಮತ್ತು ಖಾದಿಬಟ್ಟೆ ತೊಡುವ ವ್ರತ ಕೈಗೊಂಡರು. ಅವರು ಸದಾ ಖಾದಿ ಉಡುಪು ಧರಿಸುತ್ತಿದ್ದರು.

ಕುವೆಂಪು ಅವರು ಡಿಸೆಂಬರ್ 1924ರಲ್ಲಿ ಭೂಪಾಳಂ ಚಂದ್ರಶೇಖರಯ್ಯ ಮತ್ತು ಇನ್ನಿತರ ಇಬ್ಬರು ಸ್ನೇಹಿತರೊಡಗೂಡಿ ರೈಲಿನಲ್ಲಿ ಬೆಳಗಾವಿ ರಾಷ್ಟ್ರೀಯ ಅಧಿವೇಶನಕ್ಕೆ ಹೋಗಿದ್ದರು. ಗಾಂಧೀಜಿಯನ್ನು ಕಂಡಾಗ 'ಸ್ವಾತಂತ್ರ್ಯ ದೀಕ್ಷೆಯನ್ನು ತೊಟ್ಟು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮ್ಮಿಕ್ಕುವ ಭಾರತೀಯ ಸಮಷ್ಟಿ ಚೈತನ್ಯದ ಅಗ್ನಿಸ್ಪರ್ಶ ನನ್ನ ಕವಿ ಚೇತನಕ್ಕೂ ತಗುಲಿತ್ತು' ಎಂದು ಧನ್ಯಭಾವಕ್ಕೊಳಗಾದರು. (ನೆನಪಿನ ದೋಣಿಯಲ್ಲಿ, ಪುಟ 455) ಆಗ ಅವರು 'ಜಲಿಯನ್ ವಾಲಾಬಾಗ್', 'ಟು ದೇಶಬಂಧು ದಾಸ್' ಎಂಬ ಎರಡು ಇಂಗ್ಲಿಷ್ ಕವನಗಳನ್ನು ಬರೆದರು.

ಮಹಾತ್ಮಗಾಂಧಿಯವರು 1932ರ ಸೆಪ್ಟೆಂಬರ್ 20ರಂದು ಆಮರಣಾಂತ ಉಪವಾಸ ಪ್ರಾರಂಭಿಸಿದರು. ಕುವೆಂಪು ಅವರು ಅಂದು ಉಪವಾಸ ಮಾಡಿದರು. ಜನವರಿ 1934ರಲ್ಲಿ ಮಹಾತ್ಮಗಾಂಧಿಯವರು ಹರಿಜನ ಕಾರ್ಯಕ್ಕಾಗಿ ಮೈಸೂರಿಗೆ ಬಂದಿದ್ದರು. ಟೌನ್‌ಹಾಲ್‌ನಲ್ಲಿ ಅವರನ್ನು ಕಾಣಲು 12 ಸಾವಿರಕ್ಕೂ ಹೆಚ್ಚು ಮಂದಿ ಕಿಕ್ಕಿರಿದಿದ್ದರು. ಕುವೆಂಪು ಅವರು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳೊಡನೆ ಹೋಗಿ ಆ ನೂಕುತಾಕಿನ ನಡುವೆ ಗಾಂಧಿಯನ್ನು ನೋಡಿದರು. 'ಮಹಾತ್ಮರು ಭರತಖಂಡದ ಅನಭಿಷಿಕ್ತ ಚಕ್ರವರ್ತಿ! ಸಮಸ್ತ ಜಗತ್ತಿನ ಆಚಾರ್ಯದೇವ!' ಎಂದು ಹರ್ಷೋನ್ಮಾದಗೊಂಡರು.

**ಸ್ವಾತಂತ್ರ್ಯ ಚಳವಳಿಯ ಕಾವು ಮತ್ತು ಮಹಾತ್ಮ ಗಾಂಧಿಯ ಪ್ರಭಾವ ಕನ್ನಡ ನಾಡಿನ ನೆಲದಲ್ಲೂ ದಟ್ಟವಾಗಿತ್ತು. ಆ ಚಳವಳಿಗೆ ಸ್ಫೂರ್ತಿಯಾಗಿ, ಜನಮನಕ್ಕೆ ವೈಚಾರಿಕ ಪ್ರಣಾಳಿಕೆಯನ್ನು ತಮ್ಮ ಬರಹಗಳ ಮೂಲಕ ರೂಪಿಸಿಕೊಟ್ಟ ಹಿರಿಮೆ ಕುವೆಂಪು ಅವರದು. ದೇಶಪ್ರೇಮದ ಬಗ್ಗೆ ಬರೆದುದು ಮಾತ್ರವಲ್ಲ, ಕುವೆಂಪು ಅವರ ಒಟ್ಟಾರೆ ಬದುಕೇ ಸ್ವಾತಂತ್ರ್ಯದ ಬಹುದೊಡ್ಡ ರೂಪಕ.**

**■ ಜಿ. ಕೃಷ್ಣಪ್ಪ**

### ಬರುತಲಿದೆ, ನುಗ್ಗಿ ಬರುತಲಿದೆ…

ಕುವೆಂಪು ಅವರು 1930ರಲ್ಲಿ ರಚಿಸಿದ 'ರಕ್ತಧುನಿ' ಮತ್ತು 'ಬೈಗುಗೆಂಪು' ಎರಡೂ ಕವನಗಳು ಆಗ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮದ ರಣರೋಷದ ಔರ್ವಾನಳ (ಸಮುದ್ರ ಬೆಂಕಿ)ವನ್ನು ಪ್ರತಿಬಿಂಬಿಸುತ್ತವೆ. ರಕ್ತಧುನಿಯು ಸಭೆ ಸಭೆಗಳಲ್ಲಿ ಪ್ರಾರ್ಥನೆಯ ರೂಪದಲ್ಲಿ ಆವೇಶವಾಣಿಯಿಂದ ಘೋಷಿತವಾಯಿತು. ಸ್ವಾತಂತ್ರ್ಯಸಂಗ್ರಾಮಕ್ಕೆ ರಕ್ತಕ್ರಾಂತಿ ಕೊಡುವ ರುದ್ರಗೀತೆಯಾಗಿಬಿಟ್ಟಿತು.

ಬರುತಲಿದೆ! ಬರುತಲಿದೆ!<br>
ವಿಪ್ಲವದ ರಕ್ತಧುನಿ,<br>
ನೋಡು ಹರಿದು ಬರುತಿದೆ!<br>
ಬೇನೆವಸಿರಿನಿಂದ ಚಿಮ್ಮಿ,<br>
ದಾಸ್ಯ ಶಿಲೆಯನೊಡೆದು ಹೊಮ್ಮಿ,<br>
ಶ್ರೀಮಂತರ ಕೊಳಕ ಬಿಚ್ಚಿ,<br>
ಹಳತನೆಲ್ಲ ಕೊಚ್ಚಿ ಕೊಚ್ಚಿ,<br>
ನೋಡು, ನುಗ್ಗಿಬರುತಿದೆ!<br>
(ರಕ್ತಧುನಿ – ಪಾಂಚಜನ್ಯ)

ಅಂದಿನ ವಿದ್ಯಾವಂತ ಯುವಕರು ಸ್ವಾತಂತ್ರ್ಯ ಹೋರಾಟದ ಸಭೆಗಳಲ್ಲಿ 'ಪಾಂಚಜನ್ಯ'ದ 'ನಡೆಮುಂದೆ, ನಡೆಮುಂದೆ! ನುಗ್ಗಿ ನಡೆಮುಂದೆ, ಜಗ್ಗದೆಯೆ, ಕುಗ್ಗದೆಯೆ, ಹಿಗ್ಗಿ ನಡೆಮುಂದೆ!' ಎಂದು ಹೇಳುತ್ತ – 'ನುಗ್ಗು ಮುಂದಕೆ, ಧೀರ, ಕಾಳಗದ ಕೊಲೆಗೆ! ನುಗ್ಗು ಮರಣಕೆ, ವೀರ, ಸಗ್ಗದಾ ನೆಲೆಗೆ!' ಎಂದು ಹರ್ಷೋನ್ಮಾದಗೊಳ್ಳುತ್ತಿದ್ದರು.

'ಇಂದೊ ನಾಳೆಯೊ ದಾಸನೀಶನಾಗಲೆಬೇಕು,<br>
ಎಂದಿಂದೆ ಎದ್ದೇಳಿ; ನಾಳೆಯೆನೆ ಹೋಕು!<br>
ನಾವೆ ದೇವತೆಗಳೈ! ಭಾರತವೆ ಸ್ವರ್ಗವೈ!<br>
ಭಾರತಾಂಬೆಯೆ ನಮಗೆ ದೇವಿಯೈ, ಜನನಿ!'<br>
(ಇಂದಿನ ದೇವರು – ಪಾಂಚಜನ್ಯ)

ಎಂಬ ಭಾವಗೀತೆಗಳಲ್ಲಿದ್ದ ಸ್ವಾತಂತ್ರ್ಯ ಹೋರಾಟದ ಕೆಚ್ಚು, ಕ್ರಾಂತಿಕಾರಕ ಚಿಂತನೆಗಳು ಭಾಷಣಕಾರರಿಗೆ ಸ್ಫೂರ್ತಿದಾಯಕವಾಗಿದ್ದವು. ಸ್ವಾತಂತ್ರ್ಯದ ಅರಿವನ್ನು ಉಂಟುಮಾಡುವುದರೊಂದಿಗೆ ವೈಚಾರಿಕ ಜಾಗೃತಿಯನ್ನುಂಟು ಮಾಡುತ್ತಿದ್ದವು. ಸರ್ವೋದಯ, ಸಮಾನತೆ, ಹರಿಜನೋದ್ಧಾರದ ಬಗ್ಗೆ ಕುವೆಂಪು ಅವರ ಕವನಗಳು, 'ಜಲಗಾರ' ನಾಟಕ, 'ಹಾಳೂರು' ಕಥನ ಕವನಗಳ ಸಾಲುಗಳನ್ನು ಭಾಷಣಕಾರರು ಬಳಸುತ್ತಿದ್ದರು.

ಸ್ವಾತಂತ್ರ್ಯಹೋರಾಟದಲ್ಲಿಭಾಗವಹಿಸಿ,ಕುವೆಂಪು ಕವನಗಳನ್ನು ಬಳಸಿ ಮಾತನಾಡುತ್ತಿದ್ದವರಲ್ಲಿ ಒಬ್ಬರು ಪಿ.ಎನ್. ಜವರಪ್ಪ ಗೌಡ. ಅವರ ಮೇಲೆ ಸರ್ಕಾರ ಮೊಕದ್ದಮೆ ಹೂಡಿತು. ಆಗ ನ್ಯಾಯಾಲಯದಲ್ಲಿ ಅವರೇ ವಾದ ಮಾಡುತ್ತ – 'ಕಲ್ಕಿ' ಕವನವನ್ನು ಕಟಕಟೆಯಲ್ಲಿ ಹೇಳಿ, 1 ವರ್ಷ ಜೈಲು ಶಿಕ್ಷೆ ಅನುಭವಿಸಿದರು. ಅವರು ಆ ಅನುಭವವನ್ನು 'ಕುವೆಂಪು ಸಾಹಿತ್ಯ ಮತ್ತು ಸ್ವಾತಂತ್ರ್ಯ ಹೋರಾಟ' ಲೇಖನದಲ್ಲಿ ತಿಳಿಸಿದ್ದಾರೆ. ಅವರು ಅದರಲ್ಲಿ 'ಪಾಶ್ಚಿಮಾತ್ಯರಲ್ಲಿ ಅಲ್ಲಿನ ಕವಿಗಳ ಕಾವ್ಯದಿಂದ ರಾಜಕೀಯ ಕ್ರಾಂತಿಗಳು, ಸ್ವಾತಂತ್ರ್ಯ ಹೋರಾಟಗಳು ಆದುವೆಂದೂ ನಮ್ಮಲ್ಲಿ ಹಾಗಾಗಲಿಲ್ಲವೆಂದೂ ಒಂದು ನಂಬಿಕೆಯಿದೆ. ಅದು ತಪ್ಪುಗ್ರಹಿಕೆ. ಆ ಕಾಲದಲ್ಲಿ ಕುವೆಂಪು ಅವರ 'ಪಾಂಚಜನ್ಯ' ಸರ್ಕಾರದ, ಜನತೆಯ